# ಮೈಸೂರ ಗೆಜೆಟ್ಟ

ನಂ. 19 ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. ಸನ್ 1890.

ಬೆಂಗಳೂರು, ಶನಿವಾರ, ಮೇ ತಾ|| 17, ಸನ್ 1890.


ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.


1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್‌ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ಷ ಜಡ್ಜ್‌ರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬ್‌ಆರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್‌ಟೆಂಡೆಂಟರು, ಫಾರೆಸ್ಟ್ ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪ್ರೋಸ್ಪ್ಯಾಫಿಸ್ ನೋಟಿಸ್‌ಗಳು.

3ನೇ ಭಾಗ–ಶ್ರೀಮತ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇಷ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.


## ೧ನೇ ಭಾಗ.

### ಶ್ರೀಮತ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ರೂಲ್.

ಮೈಸೂರು ಗೆಜೆಟ್ಟಿಗೆ ಚಂದಾ ಹಣವನ್ನು ಪಾವತಿಮಾಡತಕ್ಕ ವಿಷಯದಲ್ಲಿ ಹಾಲಿ ಜಾರಿಯಿರುವ ಸಡವಳಿಕವನ್ನು ರದ್ದು ಮಾಡಿ ಇದರಡಿ ಬರುವ ನಿಬಂಧನೆಯನ್ನು ವಿಧಿಸೋಣಾಗಿರುತ್ತೆ.

ಯಜ್ಮೆವುಳ್ಳ ಚಂದದಾರರು, ಅವರ ಚಂದಾ ಮೊಬಲಗನ್ನು ಅತ್ಯಂತ ಸಮೀಪವಾದ ತಾಲ್ಲೂಕು ಖಜಾನೆಗೆ ಪಾವತಿ ಮಾಡ ಬೇಕು.

ಅಮಲ್ದಾರರು ಹಾಂಗೆ ಪಾವತಿ ಮಾಡೋಣಾದ ಮೊಬಲಗಿಗೆ, ಟ್ರೆಜರಿಗೆ ಬಂದ ಮೊಬಲಗಿಗಾಗಿ ಕೊಡುವ ವಾಡಿಕೆಯಾದ ಅಚ್ಚಿನ ನಮೂನೆಯಲ್ಲಿ ದ್ವಿಪ್ರತಿ ರೇತಿಯನ್ನು ತಯಾರ್ಮಾಡಿಕೊಡತಕ್ಕದ್ದು.

ಚಂದಾದಾರನು ಡ್ಯೂಪ್ಲಿಕೇಟ್ ರೇತಿಯನ್ನು ತನ್ನಲ್ಲಿ ಯಿಟ್ಟುಕೊಂಡು, ಒರಿಜಿನಲ್ ರೇತಿಯನ್ನು ತನ್ನ ದರಖಾಸ್ತಿನ ಸಂಗಡ ಮೈಸೂರು ಗೆಜೆಟ್ ಕಂಪೈಲರವರಿಗೆ ಕಳುಹಿಸತಕ್ಕದ್ದು.

ಕಂಪೈಲರವರು ಟ್ರೆಜರಿ ರೇತಿಯನ್ನು ಹಣಬಂದಂತೆ ಒಪ್ಪಿಕೊಳ್ಳುವರು.

ತಾರೀಖು 18ನೇ ಏಪ್ರೆಲ್ 1890.

ಕ್ಯಾಂಪ್ ನಂ. 107.—(1888ನೇ ಇಸವಿಯ 4ನೇ ರೆಗ್ಯುಲೇಷನ್ ಎಂಬ) ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನಿನ 2ನೇ ಕಲಮನುಸರಿಸಿ, ಯಿದರಡಿ ನಮೂದಾಗುವ ಪರಭಾರಿಯಾದ ಗ್ರಾಮಗಳಿಗೆ ಸದರೀ ಕೋಡಿನ 8 ವ 9 ನೇ ಪ್ರಕರಣಗಳ ನಿಬಂಧನೆಗಳು ಲಗಾವಾಗಿರತಕ್ಕದ್ದೆಂದು ಮೈಸೂರು ಸೀಮೆಯ ಶ್ರೀಮನ್ಮಹಾರಾಜಾ ಸರ್ಕಾರದವರು ಆಜ್ಞಾಪಿಸಿರುತ್ತಾರೆ.

(1.) ನೆಲಮಂಗಲ ತಾಲ್ಲೂಕಿನ ದೊಡ್ಡಬೆಲೆ ಹೋಬಳಿಗೆ ಸೇರಿದ ಗುಂಡೇನಹಳ್ಳಿ ಕಾಯಂಗುತ್ತಾ ಗ್ರಾಮ.

(2.) ಮಾಗಡಿ ತಾಲ್ಲೂಕು ತಾವರೇಕೆರೆ ಹೋಬಳಿಗೆ ಸೇರಿದ ಕುರಬರಹಳ್ಳಿ ಕಾಯಂಗುತ್ತಾ ಗ್ರಾಮ.

---

ತಾರೀಖು 20ನೇ ಏಪ್ರೆಲ್ 1890.

ಕ್ಯಾಂಪ್ ನಂ. 143.—ಗುಂಡ್ಲುಪೇಟೆ ಅಮಲ್ದಾರ್ ಖಾದರಲ್ಲಿಯವರಿಗೆ, 1890ನೇ ಇಸವಿ ಫೆಬ್ರವರೀ 22ನೇ ಮುಕ್ತಂ 879ನೇ ನಂಬರ್ ವುಳ್ಳ ಗವರ್ನ್‌ಮೆಂಟ್ ಇಸ್ತಿಹಾರ್‌ನಾಮೆಯಿಂದ ಮೆಡಿಕಲ್ ಸರಟಿಫಿಕೇಟ್ ಮೇಲೆ ಕೊಡಲ್ಪಟ್ಟ ಯರಡು ತಿಂಗಳ ರಜಾವು ಇನ್ನೂ ಒಂದು ತಿಂಗಳ ಪರಿಯಂತ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಕ್ಯಾಂಪ್ ನಂಬರ್ 146.—ಮೆ|| ಹೆಚ್. ಜೆ. ಬಾಬಾ ಯಂ. ಯೆ. ಯವರು, 1890ನೇ ಇಸವಿ ಏಪ್ರೆಲ್ 26ನೇ ಮುಕ್ತಮಿನ ಪೂರ್ವಾನ್ಹದಲ್ಲಿ ಯಡ್ಜ್ಯುಟೇಂಟ್ ಸೆಕ್ರಟೆರಿ ಆಫಿಸ್ ಚಾರ್ಜನ್ನು ವಹಿಸಿರುತ್ತಾರೆ.

---

ತಾರೀಖು 1ನೇ ಮೇ 1890ನೇ ಇಸವಿ.

ಕ್ಯಾಂಪ್ ನಂಬರ್ 168.—ಹುಜೂರು ಖಜಾನಾ ಬಕ್ಷಿ ಮೆ|| ಎ. ವೀರಾಸಾಮಿ ಮೊದಲಿಯಾರ್‌ರವರು, 1890ನೇ ಇಸವಿ ಫೆಬ್ರವರಿ 24ನೇ ಮುಕ್ತಂ ಲಾಗಾಯತು 29 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 170.—ದಿವಾನರವರ ಆಫಿಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಯಂ. ನಾರಾಯಣರಾಯರು, 1890ನೇ ಇಸವಿ ಫಿಬ್ರವರಿ 20ನೇ ಮುಕ್ತಂ ಲಾಗಾಯತು ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂಬರ್ 185.—ಸ್ಯ 1890ನೇ ಇಸವಿ ಫಿಬ್ರವರಿ 5ನೇ ಮುಕ್ತಂ ನಂ. 7140—71—200ನೇ ನಂಬರುಳ್ಳ ಮೊ|| ಸಿಡಿಂಗ್ಸಿನ ನಿಬಂಧನೆಯನ್ನನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟು ಜಗಲೂರು ತಾಲ್ಲೂಕು ಅಮಲ್ದಾರ್ ಜೆ. ಶ್ರೀನಿವಾಸರಾಯರಿಗೆ, ಅವರು ವುಪಯೋಗಿಸಿಕೊಳ್ಳುವ ತಾರೀಖು ಲಾಗಾಯತು 15 ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ಕ್ಯಾಂಪ್ ನಂ. 193.—ತರೀಕೆರೆ ತಾಲ್ಲೂಕು ಅಮಲ್ದಾರ್ ಕೃಷ್ಣಪ್ಪನವರಿಗೆ, ನೊಂದೂವರತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಕೃಷ್ಣಪ್ಪನವರು ರಜಾದ ಮೇಲೆ ಇರುವ ಪರ್ಯಂತ ಯಾ ಮತ್ತೊಂದು ಹುಕಂ ಕೊಡುವ ವರಿವಿಗೂ ತರೀಕೆರೆ ತಾಲ್ಲೂಕು ಶಿರಸ್ತೇದಾರ್ ಸುಬ್ಬಣ್ಣನವರು ತರೀಕೆರೆ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಕೆಲಸ ನೋಡ್ಕೊಂಡು ಪಂಚಾಯತಿ ಮೊಕರರ್ರಾಡಲ್ಪಟ್ಟಿರುತ್ತಾರೆ.

---

ತಾರೀಖು 7ನೇ ಮೇ 1890.

ಕ್ಯಾಂಪ್ ನಂ. 228.—ದಿವಾನರವರ ಆಫಿಸ್ ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಯಂ. ನಾರಾಯಣರಾಯರಿಗೆ, 1890ನೇ ಇಸವಿ ಮೇ 1ನೇ ಮುಕ್ತಂ 170ನೇ ನಂಬರ್ ಇಸ್ತಿಹಾರಿನ ದೆಸೆಯಿಂದ ಈಳೆದ ಫಿಬ್ರವರಿ 20ನೇ ತಾರೀಖು ಲಾಗಾಯತು ಕೊಡಲ್ಪಟ್ಟಿದ್ದ ಯರಡು ತಿಂಗಳ ಪ್ರಿವಿಲೀಜ್ ರಜಾದಿಂದ ಅವರು 1890ನೇ ಇಸವಿ ಏಪ್ರೆಲ್ 7ನೇ ತಾರೀಖಿನಲ್ಲಿ ಪುನ್ಹ ಕೆಲಸದ ಮೇಲೆ ಎಂದಿರುವದ್ದರಿಂದ ಅವರು ವುಪಯೋಗಿಸಿಕೊಳ್ಳದೆ ವುಳಿದರುಷ 12 ದಿವಸಗಳ ರಜಾವನ್ನ ರದ್ದುಪಡಿಸೋಣಾಗಿರುತ್ತದೆ.

ಕ್ಯಾಂಪ್ ನಂ. 231.—ಡಬ್ಲಿಯು. ಮಾಪಿಲಾಮಣಿ ಮೊದಲಿಯಾರ್ರು, ಸ್ಯ 1890ನೇ ಇಸವಿ ಏಪ್ರೆಲ್ ಗುರ್ರೆ ಲಾಗಾಯತ್ ಮೈಸೂರು ಸರ್ಕಾರದ ಸರ್‌ವಿಸಿನಲ್ಲಿ ಆರು ತಿಂಗಳ ವರಿವಿಗೂ ಆಜವಾಯಿಷಿ ತರೀಕ 2ನೇ ಕ್ಲಾಸ್ ಆಸ್ಪಿಟಲ್ ಅಸಿಸ್ಟೆಂಟ್‌ರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

---

ತಾರೀಖು 3ನೇ ಮೇ 1890.

ನಂ. 11.—ಮೆ|| ಯಂ. ರಾಮಸ್ವಾಮಯ್ಯರ್ ಯವರು, ಮೈಸೂರಲ್ಲಿರುವ 2ನೇ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಆಫಿಸಿನ ಚಾರ್ಜನ್ನು 1890ನೇ ಇಸವಿ ಏಪ್ರೆಲ್ 25ನೇ ತಾರೀಖಿನ ಮಧ್ಯಾನ್ಹಾತ್ಪರ ಮೆ|| ಬಿ. ಕೃಷ್ಣಯ್ಯಂಗಾರ್ ಯವರಿಗೆ ವೊಪ್ಪಿಸಿರುತ್ತಾರೆ.

---

ತಾರೀಖು 4ನೇ ಮೇ 1890.

ಕ್ಯಾಪ್ ನಂ. 241.—ಹೆಗ್ಗಡದೇವನಕೋಟೆ ತಾಲ್ಲೂಕು ಅಮಲ್ದಾರ್ ಕೆ. ಶಾಮಯ್ಯಂಗಾರ್ರಿಗೆ, ಸ್ಯ 1889ನೇ ಇಸವಿ ಡಿಸೆಂಬರ್ 2ನೇ ಮತ್ತು ಂ 252ನೇ ನಂಬರುಳ್ಳ ಈ ಆಫೀಸಿನ ಇಸ್ತಿಹಾರಿನಿಂದ ಕೊಡೋಣಾಗಿದ್ದ ಮೂರು ತಿಂಗಳ ಪ್ರಿವೆಪ್ಟಿವ್ ಅಫೀರ್ಸ್ ರಜಾಕ್ಕೆ ಜಾಸ್ತಿಯಾಗಿ ಇನ್ನೂ ಮೂರು ತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ಶಾಮಯ್ಯಂಗಾರ್ರು ರಜಾದ ಮೇಲೆ ಇರುವ ಪರ್ಯಂತ ಯಾ ಮತ್ತೊಂದು ಹುಕ್ಕುಂ ಕೊಡುವವರಿಗೂ ತಾಲ್ಲೂಕು ಶಿರಸ್ತೆದಾರ್ ಸೂರಂಣನವರು ಹೆಗ್ಗಡದೇವನಕೋಟೆ ತಾಲ್ಲೂಕಿನ ಅಮಲ್ದಾರ್ ಕೆಲಸವನ್ನ ಆಕ್ಟಿಂಗ್ ತರೀಕ್ ನೋಡುತ್ತಾ ಇರತಕ್ಕದ್ದು.

ಕ್ಯಾಂಪ್ ನಂ. 246.—ಕಡೂರು ಡಿಸ್ಟ್ರಿಕ್ಟ್ ಜನರಲ್ ಆಸ್ಪೆಟ್ಟಿಂಟ್ ಕಮ್ಮಿಷನರ್ ಮೆ॥ ಟಿ. ರಾಘವೇಂದ್ರರಾಯರಿಗೆ, 1890ನೇ ಇಸವಿ ಏಪ್ರಿಲ್ 15ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

---

ತಾರೀಖು 8ನೇ ಮೇ 1890.

ನಂ. 13.—ತಪ್ಪು ತಿದ್ದುವಿಕೆ—ಸ್ಯ 1890ನೇ ಇಸವಿ ಏಪ್ರಿಲ್ 10ನೇ ಮತ್ತು ಂ 182—31ನೇ ನಂಬರುಳ್ಳ ಇಸ್ತಿಹಾರಿನಲ್ಲಿ "ಮಾಹೆ ಮಜಕೂರು ತಾರೀಖು 6ನೇ" ಯಂಬ ಮಾತುಗಳಿಗೆ ಬದಲಾಗಿ "1890ನೇ ಇಸವಿ ಮಾರ್ಚಿ ತಾರೀಖು 6ನೇ" ಯಂಬ ಮಾತುಗಳು ಕೇರಿಸಿಕೊಳ್ಳತಕ್ಕದ್ದು.

---

ತಾರೀಖು 6ನೇ ಮೇ 1890.

ನಂ. 12.—ಸ್ಯ 1870ನೇ ಇಸವಿಯ 10ನೇ ಲ್ಯಾಂಡ್ ಅಕ್ವಿಜಿಷನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ, ಸರ್ಕಾರದ ಕೆಲಸಕ್ಕಾಗಿ ಅಂದರೆ ಸೊರಬ ತಾಲ್ಲೂಕು ಜಾಡೆ ಯಂಬ ಸ್ಥಳದಲ್ಲಿ ಪೊಲೀಸ್ ಸ್ಟೇಷನ್ ಕಟ್ಟತಕ್ಕ ಬಗ್ಗೆ ಇದರಡಿ ಕಂಡ ತಖ್ತೆಯಲ್ಲಿ ನಮೂದಾಗುವ ಜಮೀನು ಬೇಕಾಗಿರುತ್ತೆ.

| ಡಿಸ್ಟ್ರಿಕ್ಟು. | ತಾಲ್ಲೂಕು. | ಹೋಬಳಿ. | ಗ್ರಾಮ. | ಜಮೀನುದಾರನ ಹೆಸರು. | ಜಮೀನಿನ ವಿವರ ಬೀಜವರಿ ವ ಆಕಾರ. ತಪಶೀಲು ನಂಬರ್. | ಬೀಜವರಿ. ಗುಂಟೆ. | ಗಜ. | ಆಕಾರ. | | | ಪರಾ. |
|---|---|---|---|---|---|---|---|---|---|---|---|
| ಶಿವಮೊಗ್ಗ | ಸೊರಬ | ಜಾಡೆ | ಜಾಡೆ | ಶಿರಜೇ ಸ್ಥಳದಲ್ಲಿ ಹಾಲಿ ನಾನ್ಗಾಗಿರುವ ಸ್ವಾಮಿರಾವ್ ರಾವಜಹದ್ರ | ಗ್ರಾಮದ ನೈಋತ್ಯದಲ್ಲಿರುವ ಬಂಡೆ ಹತ್ತಿಲ ಭೂಮಿ ಹಳೇ ದಾಗಿ ತಕ್ತಾಗಿರುವ ಖಾನೇಸುಮಾರಿ ನಂ. 110 | 1 | 104 | 0 | 0 | 0 | ಈ ಜಮೀನಿನ ಚಕ್ಕ ಬಂದಿ ವಿವರ<br>ಪೂರ್ವಕ್ಕೆ-ಗಾಣಿಗೆರೆಯಿಂದ ಬಸಯ್ಯನ ಮನೆಯ ಗೋಡೆ ವ ಪೊದೆ<br>ಪಶ್ಚಿಮಕ್ಕೆ-ಹಿತ್ತಲಿನ ಬಂದು ಭಾಗ<br>ಉತ್ತರಕ್ಕೆ-ಪಬ್ಲಿಕ್ ರಸ್ತೆ<br>ದಕ್ಷಿಣಕ್ಕೆ-ಸದರಿ ಹಿತ್ತಲ್ ಜಮೀನಿನ ಬಂದು ಭಾಗ |

ಹುಕುಂ ಬಮೋಜೀಬ್,
ಟಿ. ಆನಂದರಾವ್,
ಚೀಫ್ ಸೆಕ್ರಿಟೆರಿ.

---